ಶ್ರೀ ಡಿ. ಟಿ. ರಾಮು.—ಸ್ವಾಮಿ, ನನ್ನ ಮೊದಲನೆ ಪ್ರಶ್ನೆಗೆ ೫೫೭೭ ನಿವೇಶನಗಳನ್ನು ಹಂಚಲಾಗಿದೆಯೆಂದು ತಿಳಿಸಿದ್ದೀರಿ, ಇಡೀ ತಾಲ್ಲೂಕಿನಲ್ಲಿ ಎಷ್ಟು ಜನ ನಿವೇಶನರಹಿತರಿದ್ದಾರೆಂಬುದನ್ನು ಗುರುತಿಸಿದ್ದೀರಾ ?

ಶ್ರೀ ಧರ್ಮಸಿಂಗ್.—ಸನ್ಮಾನ್ಯ ಅಧ್ಯಕ್ಷರೇ, ಚನ್ನಪಟ್ಟಣದಲ್ಲಿ ೫೫೭೭ ನಿವೇಶನಗಳನ್ನು ಹಂಚಿದ್ದೇವೆ. ಇಡೀ ತಾಲ್ಲೂಕಿನಲ್ಲಿ ನಿವೇಶನರಹಿತರು ಎಷ್ಟು ಜನ ಇದ್ದಾರೆ ಎನ್ನುವ ಬಗ್ಗೆ ಇನ್ನೂ ವರದಿ ಬಂದಿಲ್ಲ.

ಶ್ರೀ ಡಿ. ಟಿ. ರಾಮು.—ಸ್ವಾಮಿ, ನನ್ನ ಎರಡನೇ ಪ್ರಶ್ನೆಗೆ ಸುಮಾರು ೪೫ ಪ್ರಕರಣಗಳಲ್ಲಿ ಹೈಕೋರ್ಟಿನಿಂದ ತಡೆಯಾಜ್ಞೆ ಬಂದಿದೆ ಎಂದು ಹೇಳಿದ್ದೀರಿ. ಎಷ್ಟು ದಿವಸಗಳಲ್ಲಿ ಇವು ತೀರ್ಮಾನ ವಾಗುತ್ತವೆ ?

ಶ್ರೀ ಧರ್ಮಸಿಂಗ್.—೧೦-೩-೧೯೭೬ರಿಂದ ಸುಮಾರು ೪೫ ಕೇಸುಗಳಿಗೆ ತಡೆಯಾಜ್ಞೆ ಬಂದಿದೆ. ನಾವು ಈಗಾಗಲೇ ಸರ್ಕಾರೀ ವಕೀಲರುಗಳಿಗೆ ೧೩-೭-೧೯೮೦ರಲ್ಲಿ ಕಾನೂನು ಇಲಾಖೆಯ ಮೂಲಕ pursue ಮಾಡುವುದಕ್ಕೆ ಆದೇಶ ಕೊಟ್ಟಿದ್ದೇವೆ.

ಶ್ರೀಡಿ.ಟಿ.ರಾಮು—ಸರ್ಕಾರಿ ವಕೀಲರು ಭೂಮಾಲೀಕರ ಜೊತೆಗೆ ಷಾಮೀಲಾಗಿರುವುದು ಸರ್ಕಾರ ದವರ ಗಮನಕ್ಕೆ ಬಂದಿದೆಯೆ?

ಅಧ್ಯಕ್ಷರು.—ಅದು ಜನರಲ್ ಆಯಿತು.

ಶ್ರೀ ಧರ್ಮಸಿಂಗ್.—ಅಧ್ಯಕ್ಷರೇ, ನಿರ್ದಿಷ್ಟವಾದ ಕೇಸುಗಳು ಇದ್ದರೆ ಹೇಳಲಿ. ೧೦-೩-೧೯೭೬ ರಿಂದ ಪೆಂಡಿಂಗ್ ಇವೆ. ೧೩-೭-೧೯೮೦ರಲ್ಲಿ ಮತ್ತೆ ಡೈರೆಕ್ಷನ್ ಕೊಟ್ಟಿದ್ದೇವೆ. ಸರ್ಕಾರಿ ವಕೀಲರು ಭೂ ಮಾಲೀಕರ ಜೊತೆ ಷಾಮೀಲಾಗಿರುವಂತ ಪರದಿ ಬಂದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜೆ. ರಾಜೂಗೌಡ:—ಭೂ ಸ್ವಾಧೀನಕ್ಕೆ ಸಂಬಂಧಪಟ್ಟಂತೆ ಬಿ. ಡಿ. ಓ. ಮತ್ತು ಭೂ ಮಾಲೀಕರು ಷಾಮೀಲಾಗಿರುವಂತ ನಿದರ್ಶನ ಕೊಟ್ಟರೆ, ಅಂಥ ಅಧಿಕಾರಿಗಳ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಅಂಥ ಪ್ರಕರಣಗಳು ಗಮನಕ್ಕೆ ಬಂದಾಗ ಸಸ್ಪೆಂಡ್ ಮಾಡಿದ್ದೇವೆ. ನಿರ್ದಿಷ್ಟವಾದ ಪ್ರಕರಣಗಳನ್ನು ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ಬಿ. ಜಯಚಂದ್ರ.—ರಾಜ್ಯಪಾಲರ ಭಾಷಣದಲ್ಲಿ ಈ ವಿಚಾರಕ್ಕೆ ಸಂಬಂಧಪಟ್ಟಂತೆ ಕಾನೂನನ್ನು ಸೂಕ್ತವಾಗಿ ಮಾರ್ಪಾಟು ಮಾಡುತ್ತೇವೆಂದು ಹೇಳಿದ್ದೀರಿ. ಇದರ ಬಗ್ಗೆ ಏನಾದರೂ ಕಾರ್ಯಕ್ರಮ ಆಗಿದೆಯೆ ?

ಶ್ರೀ ಧರ್ಮಸಿಂಗ್.—ಮಾನ್ಯ ಸದಸ್ಯರ ಸಲಹೆಯನ್ನು ಸರ್ಕಾರ ಗಮನಿಸಲಾಗುವುದು.

ಶ್ರೀ ಡಿ. ಟಿ. ರಾಮು.—ಸ್ವಾಮಿ, ಕಳೆದ ಆರು ತಿಂಗಳಿಂದ ತಡೆಯಾಜ್ಞೆ ಬಂದಂತ ೪೫ ಕೇಸು ಗಳಲ್ಲಿ ಎಷ್ಟು ತೀರ್ಮಾನವಾಗಿವೆ ?

ಶ್ರೀ ಧರ್ಮಸಿಂಗ್.—ಎಲ್ಲಾ ಕೇಸುಗಳು ಹಾಗೆ ಇವೆ, ಇವತ್ತು ಕೂಡ ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿದ್ದೇನೆ.

**Establishment of a new Sub-Registry Office at Huliyur in C. N. Halli Taluk**

221. SRI T. B. JAYACHANDRA (Kallambella)—Will the Minister for Revenue be pleased to state :—

(a) whether there is any proposal before Government for establishing a new Sub-Registry Office at Huliyur in Chikkanayaknahalli Taluk, Tumkur District ?

(b) if so, the action taken and present stage at which it stands.

(c) if not, why ? furnish the details -

SRI MALLIKARJUNA M. KHARGE (Minister for Revenue)—

(a) No.

(b) Does not arise in view of reply to clause (a).

(c) Chikkanayakanahalli Taluk consists of 234 villages and the average documents registered during the years from 1976-77 to 1980-81 is as follows :

| Sl. No. | Year | No. of documents registered |
|---|---|---|
| 1. | 1976—77 | 2363 |
| 2. | 1977—77 | 3779 |
| 3. | 1978—79 | 3533 |
| 4. | 1979—80 | 2098 |
| 5. | 1980—81 | 3309 |
| | Total | 15282 |

An average of about 3056 documents per year have been registered in the Sub-Registry Office, Chikkanayakanahalli. In case the S. R. O. of Chikkanayakanahalli is bifurcated and New Sub-Registry Office is established at Huliyur each Sub-Registry Office may not be registering more than 1600 documents. Therefore it is not expedient and necessary to establish a new Sub-Registry Office at Huliyur by bifurcating the Sub-Registry Office, at C. N. Halli.

ಶ್ರೀ ಟಿ. ಬಿ. ಜಯಚಂದ್ರ.—ಚಿಕ್ಕನಾಯಕನಹಳ್ಳಿ ತಾಲ್ಲೂಕು ಹುಳಿಯೂರಿನಲ್ಲಿ ಹೊಸ ಉಪ ನೋಂದಣಿ ಕಛೇರಿಯನ್ನು ತೆಗೆಯುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದೀರಿ. ಒಂದು ತಾಲ್ಲೂಕಿಗೆ ಕನಿಷ್ಟ ನೋಂದಣಿ ಎಷ್ಟು ಇರಬೇಕು?

ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ, ಸರಾಸರಿ ೩,೦೦೦ ದಾಖಲೆಗಳು ನೋಂದಣಿಯಾಗಬೇಕಾಗುತ್ತದೆ. ಇದರ ಆಧಾರದ ಮೇಲೆ ಚಿಕ್ಕನಾಯ್ಕನಹಳ್ಳಿ ತಾಲ್ಲೂಕಿನಲ್ಲಿರತಕ್ಕ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಸಾಕಷ್ಟು ಕೆಲಸವಿದೆ ಇದಕ್ಕಿಂತ ಕಡಿಮೆ ಇದ್ದರೆ, ಕೆಲಸ ಆಗುವುದಿಲ್ಲ.

ಶ್ರೀ ಟಿ. ಬಿ. ಜಯಚಂದ್ರ.—ಸ್ವಾಮಿ, ಹುಳಿಯೂರು. ಅಂದನಕೆರೆ, ಮಂದಗೆರೆ ಹೋಬಳಿ ಗಳಿಲ್ಲಾ ಸೇರಿ, ಎಷ್ಟು ನೋಂದಣಿಯಾಗುತ್ತದೆಂಬುದನ್ನು ತಿಳಿಸುವುದಕ್ಕೆ ಸಾಧ್ಯವೆ ?

ಶ್ರೀ ಕಾಗೋಡು ತಿಮ್ಮಪ್ಪ.—ನಮ್ಮ ಲೆಕ್ಕದ ಪ್ರಕಾರ ಸುಮಾರು ೧,೬೦೦ಕ್ಕಿಂತ ಜಾಸ್ತಿ ಬರಲಾರದು.

ಶ್ರೀ ಟಿ. ಬಿ. ಜಯಚಂದ್ರ.—ಸ್ವಾಮಿ, ನನ್ನ ಸಲಹೆ ಚಿಕ್ಕನಾಯ್ಕನಹಳ್ಳಿ ತಾಲ್ಲೂಕು ಕೇಂದ್ರವಾದರೂ ಕೂಡ ಊರು ಒಂದು ಕಡೆ ಇದೆ. ಆ ದೃಷ್ಟಿಯಿಂದ ಹುಳಿಯೂರಿನಲ್ಲಿ ಒಂದು ಕಛೇರಿಯನ್ನು ತೆರೆಯುವ ಬಗ್ಗೆ ಪರಿಶೀಲನೆ ಮಾಡುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಎಲ್ಲಾ ಹೋಬಳಿ ಕೇಂದ್ರಗಳಲ್ಲಿಯೂ. ಉಪ ನೋಂದಣಿ ಕಛೇರಿಗಳನ್ನು ಮಾಡುವುದಕ್ಕೆ ಕಷ್ಟ ಇದೆ. ಜೊತೆಗೆ ಇದು ಪಾಲಿಸಿ ಮ್ಯಾಟರ್ ಕೂಡ ಇದೆ.

ಶ್ರೀ ಟಿ. ಬಿ. ಜಯಚಂದ್ರ.—ರಾಜ್ಯದಲ್ಲಿ ಒಂದು ತಾಲ್ಲೂಕಿಗೆ ಎರಡು ಉಪನೋಂದಣಿ ಕಛೇರಿಗಳನ್ನು ಎಲ್ಲಿಯೂ ತೆರದಿಲ್ಲವೆ ?

ಶ್ರೀ ಕಾಗೋಡು ತಿಮ್ಮಪ್ಪ.—ಕೆಲಸದ ಒತ್ತಡ ಇದ್ದಂತಹ ಸನ್ನಿವೇಶದಲ್ಲಿ ಮಾಡಿದ್ದೇವೆ.

ಶ್ರೀ ಟಿ. ಬಿ. ಜಯಚಂದ್ರ.—ಈ ವಿಚಾರವನ್ನು ಪರಿಶೀಲನೆ ಮಾಡುತ್ತೇವೆಂದಾರೂ ಹೇಳಿ.

ಶ್ರೀ ಡಿ. ಟಿ. ರಾಮು.—ಹೋಬಳಿ ಮಟ್ಟದಲ್ಲಿ ಡೆಪ್ಯೂಟಿ ತಹಶೀಲ್ದಾರ್‌ರವರ ಕಛೇರಿಗಳನ್ನು ತೆರೆಯುತ್ತೇವೆಂದು ಹೇಳಿದ್ದೀರಿ, ಅದೇ ರೀತಿ ಇದನ್ನು ಪತಕ್ಕೆ ತೆರೆಯಬಾರದು.

ಶ್ರೀ ಕಾಗೋಡು ತಿಮ್ಮಪ್ಪ.—ಸಬ್ ರಿಜಿಸ್ಟ್ರಾರ್ ಕಛೇರಿಯ ಕೆಲಸ ಬೇರೆ. ಡೆಪ್ಯೂಟಿ ತಹಶೀಲ್ದಾರ್‌ರವರ ಕಛೇರಿ ತೆರೆಯುವುದೇ ಬೇರೆ ಉದ್ದೇಶಕ್ಕೆ. ಕೆಲಸದ ಒತ್ತಡದ ಮೇಲೆ ಪರಿಶೀಲನೆ ಮಾಡೋಣ.

**"Provision for Contingency and Maintenance of SC/ST Hostels**

247. SRI C. M. ARMUGHAM (K.G.F.)—Will the Minister for Social Welfare, Backward Classes and Minorities be pleased to state —

(a) whether it was brought to the notice of the Government that the provision for contingency and maintenance of Hostels, etc., meant for Scheduled Caste and Scheduled Tribes are different from that of Backward Class Hostels ;

(b) whether the Government propose to set right the differential treatment meted out to these Hostels;